ಸಿ.ಸಿ. ನಂ. 2534/2024

**<u>ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಆಳಂದ</u>**

**<u>ಸಿ.ಸಿ. ನಂ. 2534/2024</u>**

**<u>ಆರೋಪಿತನ ಹೆಸರು:</u>**

1. ಸೂರ್ಯಕಾಂತ ತಂದೆ ಶಂಭುಲಿಂಗ ಮಾಲಿಪಾಟೀಲ,
   ವಃ 30 ವರ್ಷ, ಉಃ ಖಾಸಗಿ ಕೆಲಸ,

2. ಶಂಭುಲಿಂಗ ಗಂಡ ಮುರುಗೆಪ್ಪ ಮಾಲಿಪಾಟೀಲ,
   ವಃ 60 ವರ್ಷ, ಉಃ ಒಕ್ಕಲುತನ,

3. ಇಂದುಬಾಯಿ ಗಂಡ ಶಂಭುಲಿಂಗ ಮಾಲಿಪಾಟೀಲ,
   ವಃ 54 ವರ್ಷ, ಉಃ ಮನೆಕೆಲಸ,

4. ಶ್ರೀಶೈಲ ತಂದೆ ಶಂಭುಲಿಂಗ ಮಾಲಿಪಾಟೀಲ,
   ವಃ 36 ವರ್ಷ, ಉಃ ಖಾಸಗಿ ಕೆಲಸ,

5. ಶಾಂತಾಬಾಯಿ ಗಂಡ ಭಗವಂತರಾಯ ಮಾಲಿಪಾಟೀಲ,
   ವಃ 68 ವರ್ಷ, ಉಃ ಮನೆಕೆಲಸ,

6. ಅಂಬಿಕಾ ಗಂಡ ಶ್ರೀಶೈಲ ಮಾಲಿಪಾಟೀಲ,
   ವಃ 33 ವರ್ಷ, ಉಃ ಮನೆಕೆಲಸ,

   ಸಾಃ ಎಲ್ಲಾರೂ ಕರಹರಿ ಗ್ರಾಮ, ತಾಃ ಆಳಂದ.

**ಃ ಆ ವಾ ದ ನೆ ಃ**

ದಿನಾಂಕ 02.10.2023 ರಂದು ಸಾಯಂಕಾಲ 6.00 ಗಂಟೆ ಸುಮಾರಿಗೆ ನರೋಣಾ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕರಹರಿ ಗ್ರಾಮದ ಬಸನಿಲ್ದಾಣ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ, ಸಾಕ್ಷಿ ನಂ.1 ರವರು ಅಲ್ಲಿ ಇದ್ದಾಗ, ಆರೋಪಿತನಾದ ನೀವು ಆಸ್ತಿ ಸಂಖ್ಯೆ ನಂ. 1-54 ನೇದ್ದರ ಸಲುವಾಗಿ ತಕರಾರು ಮಾಡಿಕೊಂಡು ವೈಮನಸ್ಸು ಬೆಳಸಿಕೊಂಡು, ನೀವು ಜಗಳ ತೆಗೆಯುವ ಉದ್ದೇದಿಂದ ಆರೋಪಿತರಾದ ನೀವು ಕ್ರಮಕೂಟ ರಚಿಸಿಕೊಂಡು ಬಂದಿರುತ್ತೀರಿ, ಆ ಮೂಲಕ ನೀವು

ಭಾ.ದಂ.ಸಂ. ಕಲಂ 143 ಸಹ ಕಲಂ 149ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಎರಡನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು ಜಗಳ ತೆಗೆದು ಬಲ ಪ್ರಯೋಗ ಮಾಡಿರುತ್ತೀರಿ, ಆ ಮೂಲಕ ನೀವು ಭಾ.ದಂ.ಸಂ. ಕಲಂ 147 ಸಹ ಕಲಂ 149ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಮೂರನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 1, 2 ಮತ್ತು 3ನೇ ಆರೋಪಿತರಾದ ನೀವು ಸಾಕ್ಷಿ ನಂ.1 ರವರಿಗೆ ಅಕ್ರಮವಾಗಿ ತಡೆದು ಅವರನ್ನು ಕಾನೂನಾತ್ಮಕವಾಗಿ ಚಲಿಸಲು ಬಿಡದಂತೆ ಮಾಡಿರುತ್ತೀರಿ, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ.ಕಲಂ 341 ಸಹ ಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ನಾಲ್ಕನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 1 ರಿಂದ 3ನೇ ಆರೋಪಿತರಾದ ನೀವು ಸಾಕ್ಷಿ ನಂ.1 ಮತ್ತು ಸಾಕ್ಷಿ ನಂ.6 ಮತ್ತು 7 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ.ಕಲಂ 504 ಸಹ ಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಐದನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 1 ಮತ್ತು 2ನೇ ಆರೋಪಿತರಾದ ನೀವು ಸಾಕ್ಷಿ ನಂ.1 ರವರಿಗೆ ಒತ್ತಿಯಾಗಿ ಹಿಡಿದು ಕೈಗಳಿಂದ ಹೊಡೆ ಬಡೆ ಮಾಡಿರುತ್ತೀರಿ, 1ನೇ ಆರೋಪಿತನಾದ ನೀವು ಸಾಕ್ಷಿ ನಂ.1 ರವರಿಗೆ ಕೈಯಿಂದ ಕಪಾಲ ಮೇಲೆ ಹೊಡೆದಿರುತ್ತೀರಿ, 2ನೇ ಆರೋಪಿತನಾದ ನೀವು ಸಾಕ್ಷಿ ನಂ.7 ರವರಿಗೆ ಕೈಯಿಂದ ಕಪಾಲ ಮೇಲೆ ಹೊಡೆದಿರುತ್ತೀರಿ ಹಾಗೂ 3ನೇ ಆರೋಪಿತಳಾದ ನೀವು ಸಾಕ್ಷಿ ನಂ.7 ರವರಿಗೆ ಕೈಗಳಿಂದ ಹೊಡೆ ಬಡೆ

ಮಾಡಿರುತ್ತೀರಿ, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ.ಕಲಂ 323 ಸಹ ಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಆರನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 3ನೇ ಆರೋಪಿತಳಾದ ನೀವು ಸಾಕ್ಷಿ ನಂ.1 ರವರಿಗೆ ಬಲಗಾನ ಚಪ್ಪಲಿ ತೆಗೆದು ಕಪಾಳ ಮೇಲೆ ಹೊಡೆದಿರುತ್ತೀರಿ, ಆ ಮೂಲಕ 3ನೇ ಆರೋಪಿತಳಾದ ನೀವು ಭಾರತೀಯ ದಂಡ ಸಂಹಿತೆ.ಕಲಂ 355 ಸಹ ಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಏಳನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 2ನೇ ಆರೋಪಿತನಾದ ನೀವು ಬಡಿಗೆಯಿಂದ ಸಾಕ್ಷಿ ನಂ.1 ರವರ ಬೆನ್ನಿನ ಮೇಲೆ ಹೊಡೆದಿರುತ್ತೀರಿ, ಆ ಮೂಲಕ 2ನೇ ಆರೋಪಿತನಾದ ನೀವು ಭಾರತೀಯ ದಂಡ ಸಂಹಿತೆ.ಕಲಂ 324 ಸಹ ಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಎಂಟನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 1ನೇ ಆರೋಪಿತನಾದ ನೀವು ಸಾಕ್ಷಿ ನಂ.6 ರವರ ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿರುತ್ತೀರಿ ಹಾಗೂ 2ನೇ ಆರೋಪಿತನಾದ ನೀವು ಸಾಕ್ಷಿ ನಂ.7 ರವರ ಕೂದಲು ಹಿಡಿದು ಜಗ್ಗಾಡಿ ಅವಮಾನ ಮಾಡಿ ಮಾನಭಂಗಕ್ಕೆ ಯತ್ನಿಸಿರುತ್ತೀರಿ, ಆ ಮೂಲಕ 1 ಮತ್ತು 2ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ.ಕಲಂ 354 ಸಹ ಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಒಂಬತ್ತನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, ಆರೋಪಿತರಾದ ನೀವು ಸಾಕ್ಷಿದಾರರಿಗೆ ಜೀವ ಬೇದರಿಕೆ ಹಾಕಿರುತ್ತೀರಿ, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ.ಕಲಂ 506 ಸಹ ಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಕೊನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 4, 5 ಮತ್ತು 6ನೇ ಆರೋಪಿತರಾದ ನೀವು ಇತರ ಆರೋಪಿಗಳಿಗೆ ಕುಮ್ಮಕಿ ನೀಡಿರುತ್ತೀರಿ, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ.ಕಲಂ 109 ಸಹ ಕಲಂ 149 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಪ್ರಶ್ನೆ ಃ ಈ ಮೇಲೆ ಒದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

| | |
|---|---|
| ಉತ್ತರ: ಅ-1: | ಅ-4: |
| ಅ-2: | ಅ-5: |
| ಅ-3: | ಅ-6: |

ಪ್ರಶ್ನೆ ಃ ಸದರ ಆಪಾದನೆಗೆ ನೀನು ಒಪ್ಪುತ್ತಿಯಾ ಅಥವಾ ವಿಚಾರಣೆಯಾಗಬೇಕೋ?

| | |
|---|---|
| ಉತ್ತರ: ಅ-1: | ಅ-4: |
| ಅ-2: | ಅ-5: |
| ಅ-3: | ಅ-6: |

(ಆರೋಪಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಒದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು)

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ.ಎಫ್.ಸಿ.**
**ನ್ಯಾಯಾಲಯ, ಆಳಂದ.**